ದಿನಾಂಕ 03.02.2026 ರಂದು ಸಾಕ್ಷಿಗೆ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟಿ ಸವಾಲು ವಾದಿ ಪರ ಶ್ರೀ ಜಿ.ಆರ್.ಎಸ್. ವಕೀಲರಿಂದಃ-

5. ದಾವೆ ದಾಖಲಿಸುವ 5-6 ವರುಷಗಳ ಹಿಂದೆ ನಾವು ನಮಗೆ ಸೇರಿದ ಸ್ವತ್ತಿನಲ್ಲಿ ಮನೆ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ . ಸಾಕ್ಷಿ ಮುದುವರೆದು ನಾವು ಬಹಳ ವರುಷಗಳ ಹಿಂದೆ ಮನೆ ಕಟ್ಟಿರುತ್ತೇವೆಂದು ನುಡಿಯುತ್ತಾರೆ. ನಾವು ಮುಂಗಿಲ್ಲ ಬಸವಣ್ಯಪ್ಪರವರಿಗೆ ಮಾರಾಟ ಮಾಡಿದ ಸ್ವತ್ತಿನ ಅಳತೆ 9 ಮೊಳ ಇರುತ್ತದೆ. ನಾನು ತಾಲ್ಲೂಕು ಪಂಚಾಯಿತಿಗೆ ಮೇಲ್ಮನವಿ ಸಲ್ಲಿಸಿದಾಗ ನನ್ನ ಮತ್ತು ವಾದಿ ಸ್ವತ್ತಿನ ಅಳತೆ ಮಾಡಲಾಗಿತ್ತು. ನಾಗೀಹಳ್ಳಿ ಗಿರಿಯಪ್ಪ ಎಂದರೆ ನನ್ನ ಅಜ್ಜ.

6. ವಾದಿಯರ ಸ್ವತ್ತು 11.5 * 43 ಮೀಟರ್ ಇದ್ದು ಅಡಿಗಳ ಲೆಕ್ಕದಲ್ಲಿ 38*142 ಅಡಿ ಇರುತ್ತದೆ ಎಂದರೆ ಸರಿಯಲ್ಲ . ದಾವಾಸ್ತಿ ಮತ್ತು ನಮ್ಮ ಸ್ವತ್ತಿನ ನಡುವೆ ಎರಡು ಅಡಿ ಜಾಗ ಬಿಟ್ಟು ವಾದಿ ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಡಿ 4 ರಲ್ಲಿ 52 ನೇ ಸಂಖ್ಯೆಯಲ್ಲಿರುವ ಸ್ವತ್ತನ್ನು ನಾವು ಮುಂಗಿಲ್ಲ ಬಸವಣ್ಯಪ್ಪ ರವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಅದೇ ದಾಖಲೆಯ 51 ನೇ ಸಂಖ್ಯೆಯಲ್ಲಿರುವ ಸ್ವತ್ತನ್ನು ನಾವು ಮಾರಾಟ ಮಾಡಿರುತ್ತೇವೆಂದು ನುಡಿಯುತ್ತಾರೆ. ನಿಡಿ 4 ರ 51 ನೇ ಸಂಖ್ಯೆಯಲ್ಲಿರುವ ನಾಗೀಹಳ್ಳಿ ಗಿರಿಯಣ್ಣ ಬಿನ್ ಹನುಮಣ್ಣ ಎಂದು ನಮೂದಾಗಿರುವ ಸ್ವತ್ತು ನಮ್ಮ ಸ್ವತ್ತು ಎಂದರೆ ಸರಿ . ಸದರಿ ದಾಖಲೆಯಲ್ಲಿ ನಮ್ಮ ಸ್ವತ್ತಿನ ಉದ್ದ 100 ಅಡಿ 63 ಅಡಿ ಅಗಲ ಎಂದು ನಮೂದಾಗಿದೆ ಎಂದರೆ ಸರಿ.

7. ನಾವು ತಾಲ್ಲೂಕು ಪಂಚಾಯಿತಿಯಲ್ಲಿ ಮೇಲ್ಮನವಿ ಸಲ್ಲಿಸಿದ ನಂತರ ಉದ್ದ 150 ಡಿ ಎಂದು ನಮೂದು ಮಾಡಲಾಗಿದೆ ಎಂದರೆ ಸಾಕ್ಷಿಯು ಸದರಿ ಜಾಗ ನಮ್ಮ ಅಜ್ಜನವರಿಗೆ ಸೇರಿದ್ದಾಗಿದ್ದು ಆದಕಾರಣ ಸೇರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ತಾಲ್ಲೂಕು ಪಂಚಾಯಿತಿಯಲ್ಲಿ ಮೇಲ್ಮನವಿ ಆದೇಶ ಆದ ನಂತರ 50 ಅಡಿ ಸೇರಿಸಲಾಗಿದೆ ಎಂದರೆ ಸರಿ. ನಿಡಿ 4 ರ 50 ನೇ ಸಂಖ್ಯೆಯಲ್ಲಿರುವ ಸ್ವತ್ತು ವಾದಿಯ ಸ್ವತ್ತು ಎಂದರೆ ಸರಿ. ಸದರಿ ದಾಖಲೆಯಲ್ಲಿ ಉದ್ದ 139 ಅಡಿ ಅಗಲ , 42 ಅಡಿ ಎಂದು ನಮೂದು ಆಗಿದೆ ಎಂದರೆ ಸಾಕ್ಷಿಯು ತಿದ್ದುಪಡಿ ಆಗಿದೆ ಎಂದು ನುಡಿಯುತ್ತಾರೆ. ಯಾರು ತಿದ್ದುಪಡಿ ಮಾಡಿರುತ್ತಾರೆ

ಎಂದರೆ ಪಂಚಾಯಿತಿಯವರು ತಿದ್ದುಪಡಿ ಮಾಡಿರುತ್ತಾರೆಂದು ನುಡಿಯುತ್ತಾರೆ. ಸಾಕ್ಷಿಗೆ ದಿನಾಂಕ 12.8.2016 ರಂದು ಪ್ರಕರಣ ಸಂಖ್ಯೆ 3/13-14 ರಲ್ಲಿ ಆದ ಆದೇಶ ತೋರಿಸಲಾಗಿ ಸಾಕ್ಷಿ ಗುರುತಿಸಿದ್ದು ನಿಪಿ 12 ಎಂದು ಗುರುತಿಸಲಾಯಿತು. ಸದರಿ ಆದೇಶದಲ್ಲಿ ದಾವಾ ಸ್ವತ್ತಿನ ಚಕ್ಕುಬಂದಿಯ ಪಶ್ಚಿಮಕ್ಕೆ ಸದಾನಂದಪ್ಪರವರ ಓಣಿ ಎಂದು ದಾಖಲಿಸಲಾಗಿದೆ ಎಂದರೆ ಸಾಕ್ಷಿಯು ನಮ್ಮ ಓಣಿ ಎಂದು ನುಡಿಯುತ್ತಾರೆ. ಸದರಿ ಆದೇಶದಲ್ಲಿ ದಿನಾಂಕ 28.1.2001 ರಂದು ಹಾಲಮ್ಮರವರಿಗೆ ನೀಡಲಾದ ಹಿಂಬರಹದ ಪ್ರಕಾರ ಸ್ವತ್ತಿನ ಸಂಖ್ಯೆ 122 ಮತ್ತು 123 ಕ್ಕೆ ಸಂಬಂಧಿಸಿದಂತೆ ಚಕ್ಕುಬಂದಿಯ ದಾಖಲಗೆಳು ಗ್ರಾಮ ಪಂಚಾಯಿತಿಯಲ್ಲಿ ಲಭ್ಯವಿಲ್ಲ ಎಂದು ಉಲ್ಲೇಖಿಸಲಾಗಿದೆ ಎಂದರೆ ಸರಿ. ಸದರಿ ಆದೇಶದಲ್ಲಿ ಪೂರ್ವ – ಪಶ್ಚಿಮ 11.5 ಮೀಟರ್ ಉದ್ದ 43 ಮೀಟರ್ ಒಟ್ಟು 494 ಚದುರ ಮೀಟರ್ ಸ್ವತ್ತು ಕಮಲಮ್ಮರವರಿಗೆ ಸೇರಿದ್ದು ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವ – ಪಶ್ಚಿಮ ದಿಕ್ಕಿನಲ್ಲಿ ಯಾವುದೇ ಖಾಲೀ ಸ್ವತ್ತು ಇರದೇ ಇದ್ದರೂ ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿಯರೊಂದಿಗೆ ಜಗಳ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ

( ಮರು ವಿಚಾರಣೆ ಇಲ್ಲ).

ಓ.ಹೇ.ಕೇ.ಸರಿಯಿದೆ.

(ತೆ.ನ್ಯಾ.ಸಾ.ಹೇ.ಬೆ.ಮಾಡಲಾಯಿತು).

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಶಿಕಾರಿಪುರ.